ಮನುಷ್ಯನಲ್ಲಿರುತ್ತದೆಯೊ ಅವನು ಆಡುವ ಮಾತಿನಲ್ಲಿರುತ್ತದೆಯೊ?'

ತಕ್ಷಣ ನರಹರಿ ಉತ್ತರಿಸಿದ, 'ಬಹಳ ಕ್ಲಿಷ್ಟವಾದ ಪ್ರಶ್ನೆ ಅಭಿ. ಗಂಡಾಗಿರಲಿ ಹೆಣ್ಣಾಗಿರಲಿ, ಮನುಷ್ಯನ ಬಾಹ್ಯ ಸೌಂದರ್ಯ ಇರುವುದು ಅವನ ದೈಹಿಕ ರೂಪ, ನಡೆ ನುಡಿ ಹಾವಭಾವದಲ್ಲಿ ಎಂದು ಹೇಳಬಹುದು. ನೀನು ಅದೆಲ್ಲವನ್ನೂ ಒಂದು ಎಂದು ಪರಿಗಣಿಸಿ, ಅವನಾಡುವ ಭಾಷೆ ಇನ್ನೊಂದು ಎಂದು ಪರಿಗಣಿಸಿ ಈ ಪ್ರಶ್ನೆ ಎತ್ತಿದ್ದಿ. ಮನುಷ್ಯನನ್ನು ಮನುಷ್ಯ ಎಂದು ಗುರುತಿಸುವುದು ಅವನ ಮಾತಿನ ಮೂಲಕ. ಆದರೆ ಮೂಕ ಮತ್ತು ಕಿವುಡ ಸಹ ಅದೇ ರೀತಿ ಮನುಷ್ಯ ಎಂದು ಗುರುತಿಸಲ್ಪಡುತ್ತಾನೆ. ಅದೆಂತೇ ಇರಲಿ, ಮನುಷ್ಯನ ವ್ಯಕ್ತಿತ್ವ ಅವನ ಮಾತಿನ ಮೂಲಕವೇ ವ್ಯಕ್ತವಾಗುತ್ತದೆ. ವ್ಯಕ್ತಿತ್ವದ ಸೌಂದರ್ಯ ಅವನ ಮಾತಿನಿಂದಲೇ ವ್ಯಕ್ತವಾಗುತ್ತದೆ. ಮಾತು ಎನ್ನುವುದು ಕೇವಲ ಶಬ್ದಗಳಲ್ಲ. ಧ್ವನಿ, ಹಾವಭಾವ, ಭಾಷೆಯನ್ನು ಆಡಿದ ರೀತಿ ಎಲ್ಲವನ್ನೂ ಒಳಗೊಂಡಿರುತ್ತದೆ. ಮೃಗಸಹಜ ನಗ್ನತೆ ಹೇಗೆ ಸೌಂದರ್ಯಹೀನವಾಗಿರುತ್ತದೊ ಹಾಗೆಯೇ ಭಾಷೆ ಆಗಿರದ ಬರಡು ಮಾತು ಕೂಡ ಸೌಂದರ್ಯಹೀನವಾಗಿರುತ್ತದೆ'

'ಮನುಷ್ಯರು ಒಬ್ಬರಂತೆ ಇನ್ನೊಬ್ಬರಿಲ್ಲ ಎಂಬ ವಿಚಾರ ಇರಲಿ, ಆದರೆ ಅಪ್ಪಾ, ಮನುಷ್ಯನ ಮಾನವೀಯ ಗುಣವಿಲ್ಲದ, ವಿಲಕ್ಷಣವಾದ ನಡೆನುಡಿಯನ್ನು ಕಂಡಾಗ ಮಾನವರೆಲ್ಲ ಮಾನವರಂತೆ ಯಾಕಿಲ್ಲ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಆಗಾಗ ಉಂಟಾಗುತ್ತದೆ'.

'ಇದು ಬಹುಶಃ ಸಜ್ಜನರಾದ ಎಲ್ಲರಲ್ಲೂ ಹುಟ್ಟುವ ಪ್ರಶ್ನೆ ಎಂದನಿಸುತ್ತದೆ. ಈ ಪ್ರಶ್ನೆ ನನ್ನಲ್ಲಿ ಕಾಣಿಸಿದಾಗ ನನಗನಿಸಿದ್ದೇನೆಂದರೆ, ಮನುಷ್ಯಾಕಾರದಲ್ಲಿರುವ ಎಲ್ಲರೂ ಮನುಷ್ಯರಲ್ಲ, ಮನುಷ್ಯಾಕಾರ ಇರುವ ಒಂದೇ ಒಂದು ಕಾರಣದಿಂದ ಸಕಲರನ್ನೂ ಮನುಷ್ಯರು ಎಂದು ಪರಿಗಣಿಸಬಾರದು ಎಂದು. ಕೆಲವರು ದುರ್ಜನರನ್ನು ಮೃಗಗಳು ಎನ್ನುತ್ತಾರೆ. ಆದರೆ ಮನುಷ್ಯರು ಮಾಡುವಂಥ ಕೆಟ್ಟದನ್ನು ಯಾವ ಮೃಗವೂ ಮಾಡುವುದಿಲ್ಲ. ಮನುಷ್ಯರು ಲೆಕ್ಕವಿಲ್ಲದಷ್ಟು ಕೆಟ್ಟ ಕೆಲಸ ಮಾಡುತ್ತಾರೆ. ಅಷ್ಟೇ ಅಲ್ಲ, ಮೃಗ ತನಗೆ ತಾನೇ ಕೆಟ್ಟದಾಗುವಂಥದೇನನ್ನೂ ಮಾಡುವುದಿಲ್ಲ. ಆದರೆ ಮನುಷ್ಯ ಅದನ್ನು ಸಹ ಮಾಡಿಕೊಳ್ಳುತ್ತಾನೆ. ಮನುಷ್ಯ ಚಿಂತಿಸಬಲ್ಲ, ಯೋಚನಾಶಕ್ತಿ ಇರುವ, ವಿವೇಕ ಎಂಬುದಿರುವ ಪ್ರಾಣಿ. ಇವೆಲ್ಲ ಅವನ ವ್ಯಕ್ತಿ ಸೌಂದರ್ಯದ ಅಂಶಗಳೇ ಆಗಿವೆ. ಆದರೆ ಮನುಷ್ಯ ಅದನ್ನು ಬಳಸದೆ, ಮನುಷ್ಯನೂ ಅಲ್ಲದ ಮೃಗವೂ ಅಲ್ಲದ ಒಂದು ವಿಚಿತ್ರ ಪ್ರಾಣಿಯಾಗುವ ಗುಣ ಕೂಡ ಅವನಲ್ಲಿರುತ್ತದೆ. ಮನುಷ್ಯನಿಗೆ ವಿವೇಕ ಎನ್ನುವುದಿದೆ. ಮೃಗಗಳಲ್ಲಿ ಇದೆಯೋ ಇಲ್ಲವೋ, ಕಾಮನ್ಸೆನ್ಸ್ ಸ್ವಲ್ಪ ಇದೆ ಅಂತನಿಸುತ್ತದೆ. ನಾಯಿ, ಬೆಕ್ಕು, ಹಸು ಮುಂತಾದವುಗಳ ಚಿತ್ತವೃತ್ತಿಯನ್ನು ನೋಡು; ಅವು ಒಮ್ಮೆ ಮಾಡಿದ ತಪ್ಪನ್ನು ಮತ್ತೊಮ್ಮೆ ಮಾಡುವುದಿಲ್ಲ'

ಒಂದಷ್ಟು ಹೊತ್ತು ಇಬ್ಬರೂ ಮೌನವಾಗಿದ್ದರು. ಅನಂತರ ಅಭಿ ಹೇಳಿದ, 'ಅಪ್ಪಾ, ನಿನ್ನನ್ನು ನಾನು ಕಂಡದ್ದು ಒಂದು ಪ್ರೀತಿಯ ಸಾಗರವಾಗಿ. ಪ್ರೀತಿಯೆಂದರೆ ಏನು ಅಂತ ನಂಗೆ ನಿಜವಾಗಿ ಅರ್ಥವಾಗಿಲ್ಲ. ಆದರೆ ಪ್ರೀತಿ ಎನ್ನುವುದು ನಿಜವಾಗಿ ಏನು ಅನ್ನುವುದನ್ನು ಇವತ್ತು ನೀನು ನನಗೆ ಹೇಳಬೇಕು. ಪ್ರೀತಿ ಇದ್ದರೆ ಸಾಕು, ಅದು ನಮಗೆ ಅರ್ಥವಾಗ್ಬೇಕಾಗಿಲ್ಲ ಅನ್ನೋದನ್ನ ನಾನು ನಿನ್ನನ್ನು ನೋಡಿ ಅರ್ಥ ಮಾಡಿಕೊಂಡಿದ್ದೇನೆ. ಆದರೆ ಯಾರಲ್ಲೇ ಆಗಲಿ, ನಾವು ಇಟ್ಟುಕೊಂಡಿರುವ ಪ್ರೀತಿಯ ಸ್ವರೂಪವನ್ನು ತಿಳಿದುಕೊಳ್ಳದೆ ಮುಗ್ಧವಾಗಿದ್ದರೆ ನಾವು ಯಾರನ್ನು ಪ್ರೀತಿಸುತ್ತೇವೋ ಅವರು ಅದರ ದುರುಪಯೋಗ ಮಾಡಬಹುದು, ಅಲ್ವಾ ಅಪ್ಪಾ?'

'ಹೌದು, ಪ್ರೀತಿ ಅಥವಾ ಪ್ರೇಮವನ್ನು ಅವಿಚ್ಛಿನ್ನವಾಗಿಟ್ಟುಕೊಳ್ಳಲು ಸಾಧ್ಯವಾದರೆ ಅದು ಉಳಿಯುತ್ತದೆ. ಅದು ಅಸಾಧ್ಯವೆಂದಾದರೆ, ಅದಕ್ಕೆ ಏನೇನೋ ಮಾಲಿನ್ಯ ಅಂಟಿಕೊಳ್ಳುತ್ತದೆ'

'ಮಲಿನಗೊಳ್ಳದ ಪ್ರೇಮಕ್ಕೆ ಭೂಮಿಯ ಮೇಲಿನ ಅಸಂಖ್ಯ ನಿಜದ ಬದುಕುಗಳಲ್ಲಿ ಒಂದೇ ಒಂದು ಉದಾಹರಣೆಯಾದರೂ ಸಿಗುತ್ತದೆಯೆ ಅಪ್ಪಾ?'

'ಬಹುಶಃ ಇಲ್ಲ ಅಭಿ. ಅದಿರುವುದು ನಿಜವಾಗಿ ನಡೆದಿರದ ಪೌರಾಣಿಕ ಕಥೆಗಳಲ್ಲಿ ಮಾತ್ರ. ಅಲ್ಲಿ ಕೂಡ ಜಾಲಾಡಿದರೆ ಒಂದೆರಡು ಉದಾಹರಣೆಗಳಷ್ಟೆ ಸಿಗಬಹುದು' ಎಂದು ತುಸು ತಡೆದು, ನರಹರಿ ತನ್ನ ನಿರಂತರ ಪ್ರಸನ್ನ ನಿರ್ಲಿಪ್ತ ಭಾವದಲ್ಲಿಯೇ ಹೇಳಿದ, 'ನನಗೆ ಬದುಕು ಬಹಳ

## ಇಲ್ಲಿಯವರೆಗೆ



ಅಮೆರಿಕದಿಂದ ಮರಳಿ ಬಂದ ನರಹರಿ ಮನೆ ಕಟ್ಟಿ ವಾಸ ಮಾಡಲು ಸೂಕ್ತವಾದ ಜಾಗಕ್ಕಾಗಿ ಅರ್ಧ ಭಾರತ ಸುತ್ತಾಡುತ್ತಾನೆ. ಕೊನೆಗೆ ಸಕಲೇಶಪುರದ ಆನೆಮಹಲ್ ಹತ್ತಿರ ಒಂದು ಜಾಗ ಖರೀದಿಸುತ್ತಾನೆ. ಇಲ್ಲಿ ಮನೆ ಕಟ್ಟಿಸುವ ಉದ್ದೇಶ ಹಾಗೂ ನೀಲನಕ್ಷೆ ಇಟ್ಟುಕೊಂಡು ಅದನ್ನು ಹೆಂಡತಿ ಶಾಲ್ಮಲಿ ಹಾಗೂ ಮಕ್ಕಳಿಗೆ ತಿಳಿಸುವುದಕ್ಕಾಗಿ ಅಲ್ಲಿಯೇ ಒಂದು ಸುಂದರವಾದ ಎರಡು ಅಂತಸ್ತಿನ ಮನೆ ಕಟ್ಟಿಸುತ್ತಾನೆ. ಅಮೆರಿಕದಿಂದ ಬಂದ ನರಹರಿ ಮಕ್ಕಳಾದ ಸುಕೃತಿ ಮತ್ತು ಅಭಿ ಇಬ್ಬರಿಗೂ ಇಲ್ಲಿನ ವಾತಾವರಣ ಹಿಡಿಸುವುದಿಲ್ಲ. ಗೃಹಪ್ರವೇಶವನ್ನು ಸಿಂಪಲ್ ಆಗಿ ಮಾಡಿ ಕೆಲಸಗಾರರು, ಎಂಜಿನಿಯರ್ ಹಾಗೂ ಕೆಲವೇ ಬಂಧುಗಳನ್ನು ಆಹ್ವಾನಿಸುವ ಬಗ್ಗೆ ಚಿಂತನೆ ನಡೆಯುತ್ತದೆ.

ಚಿಕ್ಕದಾಗಿ ಕಾಣಿಸುತ್ತೆ ಅಭಿ. ಕಾಲದ ಅಥವಾ ವರ್ಷದ ಅಳತೆಯಲ್ಲಿ ಅಲ್ಲ. ಬದುಕು ಒಂದು ಅಮೂರ್ತ ವಸ್ತುವಾಗಿ ಕೇವಲ ನನ್ನ ಮುಷ್ಟಿ ಗಾತ್ರದ್ದು ಮಾತ್ರ ಆಗಿರುವಂತೆ ನನಗೆ ತೋರುತ್ತದೆ. ಯಾವ ಕ್ಷಣವೂ ಅದು ನನ್ನ ಮುಷ್ಟಿಯ ಹಿಡಿತ ಬಿಡಿಸಿ ಎತ್ತಲೋ ಚಿಮ್ಮಿ ಹೋಗಬಹುದು ಅಂತನಿಸುತ್ತದೆ'.

'ಅಪ್ಪಾ, ಬದುಕು ಎನ್ನುವುದು ಎಷ್ಟು ದೊಡ್ಡದು? ಅದರಲ್ಲಿ ಪ್ರೇಮ ಎಂಬುದರ ಸ್ವರೂಪ ಏನು?'

'ನೀನು ಹೇಳು ನೋಡೋಣ' ಎಂದು ಮುಗುಳ್ನಕ್ಕ ನರಹರಿ.

ಅಭಿ ಹೇಳಿದ, 'ನನಗನಿಸುವುದೇನೆಂದರೆ, ಪ್ರೀತಿ ಅಥವಾ ಪ್ರೇಮ ಒಂದು ಭಾವನೆ ಅಷ್ಟೆ. ಇದೆಯೆಂದರೆ ಇದೆ ಇಲ್ಲವೆಂದರೆ ಇಲ್ಲ. ನಾವು ಅದನ್ನು ಯಾಕೆ ಇಟ್ಟುಕೊಳ್ಳುತ್ತೇವೆ ಎಂದರೆ ಅದರಿಂದ ನಮಗೆ ಸಂತೋಷ ಸಿಗುತ್ತದೆ. ಅದು ನಮ್ಮ ಸಕಲ ಕರ್ಮದಲ್ಲಿಯೂ ಇದ್ದರೆ ನಮಗೆ ಬದುಕು ಸುಖಕರ ಅನಿಸುತ್ತದೆ. ಗಂಡು ಹೆಣ್ಣು ನಡುವಿನ ಸಂಬಂಧದ ಭಾವ ಮತ್ತು ಕ್ರಿಯೆಯಲ್ಲಿ ಸಂತೋಷ ಎಂಬುದಿರುವುದು ಪ್ರೀತಿ ಎಂಬ ಭಾವನೆಯಲ್ಲಿ ಮಾತ್ರ'.

### 13

ಒಂದು ತಿಂಗಳ ನಂತರ ಮಗಳು ಸುಕೃತಿಯಿಂದ ಅಪ್ಪನಿಗೆ ಒಂದು ಹೃಸ್ವ ಸಂದೇಶ ಬಂತು. ಅಮ್ಮ ಮತ್ತು ಅಣ್ಣ ಮನೆಯಲ್ಲಿದ್ದರೆ ಅವರಿಗೆ ತಿಳಿಯಬಾರದೆಂದು ಸುಕೃತಿ ಫೋನಿನಲ್ಲಿ ಮಾತಾಡದೆ ಹೃಸ್ವ ಸಂದೇಶ ಮಾಡುತ್ತಿದ್ದಳು. ಎಲ್ಲಿರುವೆ ಹೇಗಿರುವೆ ಎಂದು ಕೇಳಿದಾಗ ಅಮೆರಿಕೆಯಲ್ಲೇ ಇದ್ದೇನೆ ಎಂದಷ್ಟೇ ಹೇಳುತ್ತಿದ್ದಳು. ಹೆಚ್ಚು ಹೇಳಲು ಏನೂ ಇಲ್ಲವೇನೊ ಎಂದುಕೊಳ್ಳುತ್ತಿದ್ದ ನರಹರಿ.

'ಅಪ್ಪಾ, ಎರಡು ಲಕ್ಷ ರೂಪಾಯಿ ಬೇಕು' ಎಂಬುದು ಸುಕೃತಿಯ ಸಂದೇಶವಾಗಿತ್ತು. ಯಾಕೆ ಏನು ಎಂದೇನೂ ಕೇಳದೆ ಪ್ರೀತಿಸಾಗರನಾದ ನರಹರಿ ಎರಡು ಲಕ್ಷ ಸುಕೃತಿಯ ಅಕೌಂಟಿಗೆ ಕಳಿಸಿದ. ಮಕ್ಕಳಂತಿರಲಿ, ಯಾರೇ ಆಗಲಿ 'ಸ್ವಲ್ಪ ಹಣ ಬೇಕಾಗಿತ್ತು' ಎಂದು ಕಡ ಕೇಳಿದಾಗ ಕೂಡ ನರಹರಿ ಇಲ್ಲ ಎನ್ನುತ್ತಿರಲಿಲ್ಲ. ಯಾಕೆ ಏನು ಎಂಬ ಪ್ರಶ್ನೆ ಕೇಳದೆ ಕೇಳಿದಷ್ಟು ಕೊಟ್ಟುಬಿಡುತ್ತಿದ್ದ. ಸುಕೃತಿ ಫೋನಿನಲ್ಲಿ ಅವಳಾಗಿಯೇ, 'ಈಗ ಹೆಚ್ಚು ಸಂಬಳದ